ಅ) ಮುಳವಾಡ ಏತ ನೀರಾವರಿ ಯೋಜನೆಯ ಪಶ್ಚಿಮ ಕಾಲುವೆಯ ಮೂಲಕ ಮಮದಾಪೂರ ದೊಡ್ಡ ಕೆರೆಗೆ ನೀರು ತರಿಸುವ ವಿಚಾರವಾಗಿ ಜಲ ಸಂಪನ್ಮೂಲ ಇಲಾಖೆಯವರು ಕೆರೆಯಲ್ಲಿ ಹೂಳು ತೆಗೆಯುವಂತೆ ಸಣ್ಣ ನೀರಾವರಿ ಇಲಾಖೆಗೆ ಕೋರಿರುವುದು ನಿಜವೇ;

ಆ) ಹಾಗಾದರೆ ಸಣ್ಣ ನೀರಾವರಿ ಇಲಾಖೆಯಿಂದ ಮಮದಾಪೂರ ಕೆರೆಯಲ್ಲಿನ ಹೂಳು ತೆಗೆಯಲು ಸರಕಾರ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ;

ಇ) ಕ್ರಮಕೈಗೊಳ್ಳದೇ ಇದ್ದಲ್ಲಿ ಮಹತ್ವದ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸರ್ಕಾರ ಹೂಳು ತೆಗೆಯುವುದಕ್ಕಾಗಿ ಏನಾದರೂ ಕ್ರಮ ಕೈಗೊಳ್ಳುವುದೇ;

ಈ) ಹೂಳು ತೆಗೆಯಲು ತಗಲುವ ಅಂದಾಜು ವೆಚ್ಚ ಎಷ್ಟು;

ಉ) ಯಾವ ಮೂಲಗಳಿಂದ ಅನುದಾನವನ್ನು ಕ್ರೋಢೀಕರಿಸಿ ಹೂಳು ತೆಗೆಯಲಾಗುವುದು;

ಊ) ಯಾವ ಕಾಲ ಮಿತಿಯೊಳಗಾಗಿ ಹೂಳು ತೆಗೆದು ನೀರು ತುಂಬಿಸುವ ಯೋಜನೆಗೆ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ನಿಜ.

ಆ) ಮತ್ತು ಇ) 2002–03ನೇ ಸಾಲಿನಲ್ಲಿ ಸದರಿ ಕೆರೆಗೆ ಸುಮಾರು 13.20 ಲಕ್ಷದಷ್ಟು ಹಣವನ್ನು ವೆಚ್ಚಮಾಡಿ ಬರಗಾಲ ಕಾಮಗಾರಿ ಹಾಗೂ ರೈತ ಕಾಯಕ ಕೆರೆ ಯೋಜನೆಯಡಿಯಲ್ಲಿ ಹೂಳನ್ನು ತೆಗೆಯಲಾಗಿದೆ. ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಸುಮಾರು ರೂ. 150.00 ಲಕ್ಷಗಳು.

ಉ) ಸರ್ಕಾರದ ಮೂಲಗಳಿಂದ ಹೂಳು ತೆಗೆಯಲು ಉದ್ದೇಶಿಸಿದೆ.

ಊ) ಕಾಮಗಾರಿ ಮಂಜೂರಾಗದೆ ಇರುವುದರಿಂದ ಕಾಲಮಿತಿಯನ್ನು ನಿರ್ಧರಿಸಲಾಗುವುದಿಲ್ಲ.

529(847) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರಕ್ಕೆ ಇದೆಯೇ;

ಆ) ರಾಜ್ಯದಲ್ಲಿ ಯಾವ ಯಾವ ಕಡೆಗಳಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರದ ಮುಂದೆ ಪ್ರಸ್ತಾವನೆಗಳು ಇವೆ;

ಇ) ಪ್ರಸ್ತಾವನೆಗಳಿಗೆ ಸಂಬಂಧವಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಈ) ನಿರ್ದಿಷ್ಟಪಡಿಸಿದ ಕಾಲ ನಿಗದಿತ ಒಳಗಾಗಿ ರಾಜ್ಯದಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವುದು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಹೌದು.

ಆ), ಇ) ಮತ್ತು ಈ) ರಾಜ್ಯದ 130 ಸ್ಥಳಗಳಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರದಲ್ಲಿ ಪ್ರಸ್ತಾವನೆಗಳು ಮಂಜೂರಾತಿಗಾಗಿ ಬಂದಿದ್ದು, ಈಗಾಗಲೇ ಹಾಸನ ಜಿಲ್ಲೆಗೆ ಸರ್ಕಾರದ ಆದೇಶ ಸಂಖ್ಯೆ ಇಡಿ 73 ಎಸ್‌ಹೆಚ್‌ಹೆಚ್ 2006, ದಿನಾಂಕ: 20-06-2006 ರಲ್ಲಿ 13 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ. ಉಳಿದ 117 ಸ್ಥಳಗಳಲ್ಲಿ ಡಾ: ನಂಜುಂಡಪ್ಪರವರ ವರದಿಯನ್ನು ಆಧರಿಸಿ ಹಾಗೂ ಅತ್ಯವಶ್ಯಕವೆಂದು ಪರಿಗಣಿಸಿರುವ ಸ್ಥಳಗಳ ಬಗ್ಗೆ ವಿಮರ್ಶಿಸಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

530(848) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಇಚ್ಛೆ ಸರ್ಕಾರಕ್ಕೆ ಇದೆಯೇ;

ಆ) ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರದ ಮುಂದಿನ ಪ್ರಸ್ತಾವನೆಗಳ ಸಂಖ್ಯೆ ಎಷ್ಟು;

ಇ) ಪ್ರಸ್ತಾಪಿತ ಈ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಯಾವಾಗ ಮಂಜೂರು ಮಾಡುವುದು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಹೌದು.

ಆ) 365

ಇ) 2006-07ನೇ ಸಾಲಿಗೆ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.